# ಘುಸ್ಕೋಸ್ ಶಾಲೆ[ಐಸಿಎಸ್ಇ]

ಇಂದಿರಾನಗರ ಬೆಂಗಳೂರು

ಅರ್ಧ ವಾರ್ಷಿಕ ಪರೀಕ್ಷೆ – 2016-17

ವಿಷಯ; ಕನ್ನಡ ದ್ವಿತೀಯ ಭಾಷೆ

ತರಗತಿ;VI

ಅಂಕಗಳು;80

---

ವಿಭಾಗ – ಎ

I. ಅರ್ಥ ಬರೆಯಿರಿ. 4

೧. ಕೊರಡಿ = ೨. ಅಭಿಪ್ರಾಯ = ೩. ಕಂಪು = ೪. ದೃಢಸಂಕಲ್ಪ = ೫. ಕಪೋತ = ೬. ಕಂಗೊಳಿಸು = ೭. ಸರ್ವರು = ೮. ಅಭಿವೃದ್ಧಿ =

II. ಬಿಟ್ಟಸ್ಥಳ ತುಂಬಿರಿ. 2½

೧. ಕನ್ನಡದಲ್ಲಿ ----- ಸಾಹಿತ್ಯದ ಒಂದು ಮಹಾ ಭಂಡಾರವೇ ಇದೆ.

೨. ----- ಚೈನಾದಲ್ಲಿ ಒಂದು ಸಾಮ್ರಾಜ್ಯವನ್ನು ಸ್ಥಾಪಿಸಿದನು.

೩. ಊಶೀನರ ಬಳಿಕ ------ ಚಕ್ರವರ್ತಿಯಾದನು.

೪. ನಂಜನಗೂಡಿನಲ್ಲಿ ----- ಎಂಬ ಪವಿತ್ರ ನದಿ ಹರಿಯುತ್ತದೆ.

೫. ಚೈನ ದೇಶದ ಉತ್ತರ ಭಾಗದಲ್ಲಿ ಒಂದು ವಿಶಾಲವಾದ ----ಪ್ರದೇಶವಿತ್ತು.

III. ಪದ್ಯವನ್ನು ಪೂರ್ತಿಗೊಳಿಸಿರಿ. 6

೧. ಗೆಳೆಯರೆ ಬನ್ನಿರಿ ---- ----

-------- -------

---- ---- ---- ----

---- ನೆಡುವುದಕ್ಕೆಂದು ||

೨. ಸರ್ವರು ಹೊಸ ಹೊಸ

---- ----

---- ----

ಹೊಟ್ಟೆಗೆ ಇಳಿಸುವರು ||

IV. ಹೊಂದಿಸಿ ಬರೆಯಿರಿ. 3

| | |
|---|---|
| ೧. ಜಾನಪದ | ನಿರ್ಮಾಣಗೊಂಡಿತು |
| ೨. ಮಹಾಗೋಡೆ | ರಾಜಧರ್ಮ |
| ೩. ಶಿಬಿಯ | ದರ್ಶನ |
| ೪. ನಂಜನಗೂಡು | ಪರೀಕ್ಷೆ |
| ೫. ಧರ್ಮದ | ಸಾಹಿತ್ಯ |
| ೬. ದೇವರ | ಯಾತ್ರಾಸ್ಥಳ |

V. ಸ್ವಂತ ವಾಕ್ಯದಲ್ಲಿ ಬರೆಯಿರಿ. 7

೧. ಮನರಂಜನೆ – ೨. ಚಕ್ರವರ್ತಿ – ೩. ಪರೀಕ್ಷೆ – ೪. ಶರೀರ – ೫. ಅವಶ್ಯಕತೆ –
೬. ಮಹಾಗೊಡೆ – ೭. ತಕ್ಕಡಿ –

VI. ವಿರುದ್ಧಾರ್ಥಕ ಪದ ಬರೆಯಿರಿ. 5

೧. ಪ್ರಚಾರ ೨. ಈಗ ೩. ಒಳಗೆ ೪. ಪ್ರಶ್ನೆ ೫. ಸರಳ
೬. ಜಾಣತನ ೭. ವಿಶ್ವಾಸ ೮. ನಿಜ ೯. ಸಮಾಧಾನ ೧೦. ಗುರು

VII. ಸರಿ /ತಪ್ಪು ಬರೆಯಿರಿ. 2

೧. ನಂಜನಗೂಡಿನಲ್ಲಿ ಕಾವೇರಿ ನದಿ ಹರಿಯುತ್ತದೆ.
೨. ಹೈದರಾಲಿಯು ಒಂದು ಆನೆಯನ್ನು ಸಾಕಿದನಂತೆ.
೩. ನಂಜನಗೂಡು ಒಂದು ವ್ಯಾಪಾರದ ಕ್ಷೇತ್ರ.
೪. ನಂಜನಗೂಡಿನಲ್ಲಿ ಒಂದು ದೊಡ್ಡ ಜಾತ್ರೆ ನಡೆಯುತ್ತದೆ.

VIII. ಮಾದರಿಯಂತೆ ಬರೆಯಿರಿ. 3

ಮಾದರಿ; ಓದುವ – ಓದೋಣ. ಬರೆಯುವ – ಬರೆಯೋಣ.

೧. ನೋಡುವ – ೨. ತೋಡುವ – ೩. ಹಚ್ಚುವ – ೪. ಹಣಿಸುವ –
೫. ಮುಚ್ಚುವ – ೬. ಉಣಿಸುವ –

IX. ಗುಂಪಿಗೆ ಸೇರದ ಪದ ಬರೆಯಿರಿ. 2½

೧. ಅಪಾಯ, ಉಪಾಯ, ಯುಕ್ತಿ, ತಂತ್ರ
೨. ಪುಸ್ತಕ, ಪೆನ್ನು, ಇಡ್ಲಿ, ಗಡಿಯಾರ
೩. ಗಾಯನ, ಸಂಗೀತ, ಹಾಡು, ಲಾಡು
೪. ನದಿ, ಸರೋವರ, ಸಮುದ್ರ, ಭೂಮಿ
೫. ಹೀರೆಕಾಯಿ, ಪ್ರಾಣಿ, ಸೌತೆಕಾಯಿ, ಬಟಾಣಿ

X. ಪ್ಯಾಸೇಜ್

ಒಂದು ಊರಿನಲ್ಲಿ ಓರ್ವ ಬ್ರಾಹ್ಮಣನಿದ್ದನು. ಅವನು ಸಕಲಶಾಸ್ತ್ರ ಪುರಾಣಗಳನ್ನು ಓದಿ ಪಂಡಿತನಾಗಿದ್ದನು. ಆದ್ದರಿಂದ ಅವನಿಗೆ ತಾನು ಎಲ್ಲವನ್ನು ತಿಳಿದಿರಿವ ಸರ್ವಜ್ಞ ಎಂಬ ಅಹಂಭಾವವಿತ್ತು. ಅವನು ಇನ್ನು ತಾನು ಕಲಿಯುವುದು ಏನೂ ಇಲ್ಲವೆಂದು ಭಾವಿಸಿದ್ದನು. ಮನುಷ್ಯನು ಎಷ್ಟು ಕಲಿತರೂ ಕಲಿಯುವುದು ಇದ್ದೇ ಇರುತ್ತದೆ. ಆದುದರಿಂದ ಯಾವ ಮನುಷ್ಯನು ಪರಿಪೂರ್ಣ ಜ್ಞಾನಿಯಲ್ಲ. ಆದರೆ ಆ ಪಂಡಿತನು ಈ ಸತ್ಯವನ್ನು ಮರೆತಂತಿದ್ದನು. ಅವನು ಎಲ್ಲರ ಮುಂದೆ "ತನಗೆ ಎಲ್ಲವೂ ಗೊತ್ತು ತನಗೆ ತಿಳಿಯದ ವಿಚಾರವೇ ಇಲ್ಲ ಎಂದು ಜಂಬದಿಂದ ಹೇಳಿಕೊಳ್ಳುತ್ತಿದ್ದನು.

ಒಂದು ದಿನ ಅವನು ಪಕ್ಕದ ಊರಿಗೆಂದು ಹೊರಟನು. ಆ ಊರಿಗೆ ದೋಣಿಯ ಮೂಲಕ ಒಂದು ನದಿಯನ್ನು ದಾಟಿಕೊಂಡು ಹೋಗಬೇಕಿತ್ತು. ಆ ನಂತರ ಪಂಡಿತನು ದೋಣಿಯಲ್ಲಿ ಕುಳಿತು ನಾನು ಸಕಲ ಶಾಸ್ತ್ರವನ್ನೆಲ್ಲ ಕಲಿತ ಪಂಡಿತ ನನಗೆ ತಿಳಿಯದೇ ಇರುವ ವಿಚಾರ ಯಾವುದೇ ಇಲ್ಲ, ಯಾವ ವಿಷಯ ಕೇಳಿದರು ನೀರು ಕುಡಿದಷ್ಟು ಸುಲಭವಾಗಿ ಹೇಳುತ್ತೇನೆ ಎಂದು ಜಂಬದಿಂದ ಹೇಳಿಕೊಳ್ಳುತ್ತಿದ್ದನು. ನಿನಗೆ ಶಾಸ್ತ್ರಪುರಾಣಗಳ ಬಗ್ಗೆ ಏನಾದರು ಗೊತ್ತಿದೆಯೆಂದು ಪಂಡಿತನು ಅಂಬಿಗನನ್ನು ಪ್ರಶ್ನಿಸುತ್ತಾನೆ.

ಪ್ರಶ್ನೆಗಳು; 5

೧. ಬ್ರಾಹ್ಮಣನು ಏನನ್ನು ಓದಿ ಪಂಡಿತನಾಗಿದ್ದನು ?
೨. ಪಂಡಿತನಲ್ಲಿ ಯಾವ ಅಹಂಭಾವವಿತ್ತು ?
೩. ಪಂಡಿತನು ಪಕ್ಕದ ಊರಿಗೆ ಹೇಗೆ ಹೋಗಬೇಕಿತ್ತು ?
೪. ಪಂಡಿತನು ಜಂಬದಿಂದ ಏನೆಂದು ಹೇಳಿಕೊಳ್ಳುತ್ತಿದ್ದನು ?
೫. ಅಂಬಿಗನೊಂದಿಗೆ ಪಂಡಿತನು ಏನೆಂದು ಕೇಳಿದನು ?

ವಿಭಾಗ – ಬಿ

XI. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ. 13

೧. ಮಕ್ಕಳು ಎದ್ದು ನಿಂತು ಯಾರಿಗೆ ಗೌರವ ಸೂಚಿಸಿದರು ?
೨. ಕತ್ತೆ ಮತ್ತು ನರಿ ಯಾವ ಮಾರ್ಗದಲ್ಲಿ ಹೋಗುತ್ತಿದ್ದವು ?
೩. ಗೆಳೆಯರು ಗಿಡಗಳ ಆರೈಕೆ ಹೇಗೆ ಮಾಡುತ್ತಾರೆ ?

೪. ಗುಡ್ಡಗಾಡು ಪ್ರದೇಶದಲ್ಲಿ ಯಾರು ವಾಸವಾಗಿದ್ದರು ?
೫. ಶಿಬಿಯು ಯಾಗವನ್ನು ಎಲ್ಲಿ ನಡೆಸುತ್ತಿದ್ದನು ?
೬. ನಂಜನಗೂಡಿನಲ್ಲಿ ಯಾವ ನದಿ ಹರಿಯುತ್ತದೆ ?
೭. ಜಾತ್ರೆಯು ಯಾರ ಮನಸ್ಸಿಗೆ ಹರ್ಷ ನೀಡುತ್ತದೆ ?
೮. ಭೂಮಿ ಯಾವಾಗ ತಂಪಾಗುತ್ತದೆ ?
೯. ಚೈನಾ ದೇಶದ ಯಾವ ಭಾಗದಲ್ಲಿ ಗುಡ್ಡಗಾಡು ಪ್ರದೇಶವಿತ್ತು ?
೧೦. ಶಿಬಿ ಚಕ್ರವರ್ತಿಯು ಯಾವ ಪರೀಕ್ಷೆಯಲ್ಲಿ ಜಯಶಾಲಿಯಾದನು ?
೧೧. ನಂಜನಗೂಡು ಯಾವ ಜಿಲ್ಲೆಯಲ್ಲಿದೆ ?
೧೨. ಚಿಣ್ಣರು ಯಾರ ದುಡ್ಡಿನಲ್ಲಿ ಮೋಜು ಮಾಡುತ್ತಾರೆ ?
೧೩. ಗಿಡ– ಮೂಲಿಕೆಗಳಿಗೆ ಯಾವ ಗುಣವಿರುತ್ತದೆ ?

XII. ಈ ಮಾತನ್ನು ಯಾರು ಯಾರಿಗೆ ಹೇಳಿದರು ? 3

೧. "ದಯವಿಟ್ಟು ನನ್ನ ಪ್ರಾಣವನ್ನು ರಕ್ಷಿಸು ಪ್ರಭು".
೨. "ಎಲೈ ರಾಜನೆ, ಪಾರಿವಾಳವು ನನಗೆ ಪ್ರಿಯವಾದ ಆಹಾರ".

XIII. ಕೆಳಗಿನ ಪ್ರಶ್ನೆಗಳಿಗೆ 2/3 ವಾಕ್ಯದಲ್ಲಿ ಉತ್ತರಿಸಿರಿ. 16

೧. ನೀತಿ ಶಿಕ್ಷಣದ ಅವಧಿಯಲ್ಲಿ ಶಿಕ್ಷಕರು ಏನು ನಡೆಸುತ್ತಾರೆ ?
೨. ಹೂಣರು ರಾಜ್ಯಗಳಿಗೆ ನುಗ್ಗಿ ಬಂದು ಏನು ಮಾಡುತ್ತಿದ್ದರು ?
೩. ಶಿಬಿ ರಾಜನು ಪಾರಿವಾಳಕ್ಕೆ ಏನೆಂದು ಭರವಸೆ ನೀಡಿದನು ?
೪. ನಂಜನಗೂಡಿನಲ್ಲಿ ಭಕ್ತರ ಸಂಖ್ಯೆ ಯಾವ ಯಾವ ದಿನ ಹೆಚ್ಚಾಗಿರುತ್ತದೆ ?
೫. ಮಳೆಯಿಂದಾಗುವ ಪ್ರಯೋಜನಗಳೇನು ?
೬. ಶಿಬಿ ಚಕ್ರವರ್ತಿ ಎಂತಹ ವ್ಯಕ್ತಿಯಾಗಿದ್ದನು ?
೭. ಕಲಚೂರಿ ನಂಜರಾಜಯ್ಯ ಯಾರು ? ಅವನು ದೇವಸ್ಥಾನದ ಅಭಿವೃದ್ಧಿಗೆ ಮಾಡಿದ ಕೆಲಸಗಳಾವುವು ?
೮. ವನಗಳಿಂದ ನಮಗೆ ಯಾವ ಯಾವ ಕಚ್ಚಾ ಪದಾರ್ಥಗಳು ಸಿಗುತ್ತವೆ ?

XIV. ನಿಮ್ಮ ಶಾಲೆಯಲ್ಲಿ ನಡೆದ ವಾರ್ಷಿಕೋತ್ಸವದ ಕುರಿತು ನಿಮ್ಮ ಗೆಳೆಯ/ ಗೆಳತಿಗೆ ಒಂದು ಪತ್ರವನ್ನು ಬರೆಯಿರಿ. 4

XV. ಪ್ರಬಂಧ 4

೧. ದೂರದರ್ಶನ